ಕರ್ನಾಟಕ ವಿಧಾನ ಪರಿಷತ್

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ - 333
ಉತ್ತರಿಸಬೇಕಾದ ದಿನಾಂಕ - 06-03-2020
ಸದಸ್ಯರ ಹೆಸರು - ಶ್ರೀ ಎನ್.ರವಿಕುಮಾರ್ (ವಿಧಾನ ಸಭೆಯಿಂದ ಚುನಾಯಿತರಾದವರು)
ಉತ್ತರಿಸುವ ಸಚಿವರು - ಮಾನ್ಯ ಕೈಮಗ್ಗ ಮತ್ತು ಜವಳಿ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಸಚಿವರು.

ಕ್ರ. ಸಂ	ಪ್ರಶ್ನೆ	ಉತ್ತರ
ಅ)	ರಾಜ್ಯದಲ್ಲಿ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯಡಿಯಲ್ಲಿ ಎಷ್ಟು ಮುಸ್ಲಿಂ ವಸತಿ ಶಾಲೆಗಳಿವೆ;(ಜಿಲ್ಲಾವಾರು ಮಾಹಿತಿ ನೀಡುವುದು) ಸರ್ಕಾರಿ ಮುಸ್ಲಿಂ ವಸತಿ ಶಾಲೆಗಳಲ್ಲಿ ವಿದ್ಯಾಭ್ಯಾಸ ಮಾಡುತ್ತಿರುವ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು; ಅದರಲ್ಲಿ ಹೆಣ್ಣು ಮಕ್ಕಳ ಸಂಖ್ಯೆ ಎಷ್ಟು;	ರಾಜ್ಯದ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯಡಿಯಲ್ಲಿ 05 ಮುಸ್ಲಿಂ ವಸತಿ ಶಾಲೆಗಳಿವೆ;(ಜಿಲ್ಲಾವಾರು ಮಾಹಿತಿ **ಅನುಬಂಧ-1 ರಲ್ಲಿ ಒದಗಿಸಲಾಗಿದೆ)** ಸರ್ಕಾರಿ ಮುಸ್ಲಿಂ ವಸತಿ ಶಾಲೆಗಳಲ್ಲಿ ವಿದ್ಯಾಭ್ಯಾಸ ಮಾಡುತ್ತಿರುವ ವಿದ್ಯಾರ್ಥಿಗಳ ಸಂಖ್ಯೆ 825; ಅದರಲ್ಲಿ ಹೆಣ್ಣು ಮಕ್ಕಳ ಸಂಖ್ಯೆ 606;
ಆ)	ರಾಜ್ಯದಲ್ಲಿ ಅಲ್ಪಸಂಖ್ಯಾತರ ವಸತಿ ಶಾಲೆಗಳಲ್ಲಿ ಕಲಿಯುತ್ತಿರುವ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು; ಈ ವಸತಿ ಶಾಲೆಗಳಲ್ಲಿ ಯಾವ ಯಾವ ಧರ್ಮದ ಅಲ್ಪಸಂಖ್ಯಾತರು ವಿದ್ಯಾಭ್ಯಾಸ ಮಾಡುತ್ತಿದ್ದಾರೆ; (ಜಾತಿವಾರು ಜಿಲ್ಲಾವಾರು ವಿವರ ನೀಡುವುದು); ವಸತಿ ಶಾಲೆಗಳಲ್ಲಿ ಯಾವ ಯಾವ ಧರ್ಮದವರಿಗೆ ಪ್ರಾರ್ಥನೆ ಸಲ್ಲಿಸಲು ಸ್ಥಳಾವಕಾಶ ನೀಡಲಾಗಿದೆ;	ರಾಜ್ಯದಲ್ಲಿ ಅಲ್ಪಸಂಖ್ಯಾತರ ವಸತಿ ಶಾಲೆಗಳಲ್ಲಿ ಕಲಿಯುತ್ತಿರುವ ವಿದ್ಯಾರ್ಥಿಗಳ ಸಂಖ್ಯೆ 22110; ಈ ವಸತಿ ಶಾಲೆಗಳಲ್ಲಿ ವಿದ್ಯಾಭ್ಯಾಸ ಮಾಡುತ್ತಿರುವ ಅಲ್ಪಸಂಖ್ಯಾತರ ಜಾತಿವಾರು ಮತ್ತು ಜಿಲ್ಲಾವಾರು ವಿವರಗಳನ್ನು **ಅನುಬಂಧ-2 ರಲ್ಲಿ ಒದಗಿಸಲಾಗಿದೆ;** ಎಲ್ಲಾ ಧರ್ಮದವರಿಗೆ ಪ್ರಾರ್ಥನೆ ಸಲ್ಲಿಸಲು ಅವಕಾಶ ಕಲ್ಪಿಸಲಾಗಿದೆ.
ಇ)	ದಿನಾಂಕ:19.05.2018ರ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ನಿರ್ದೇಶಕರ ಆದೇಶದಲ್ಲಿ ಇಲಾಖೆಯ ಆಡಳಿತಕ್ಕೆ ಒಳಪಡುವ ಎಲ್ಲಾ ವಸತಿ ಶಾಲೆಗಳಲ್ಲಿ ಅರೆಬಿಕ್ ಶಿಕ್ಷಣ ಭೋಧಿಸಲು ಅತಿಥಿ ಶಿಕ್ಷಕರನ್ನು ನೇಮಿಸಿಕೊಳ್ಳುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಈ ಕುರಿತು ಸರ್ಕಾರದ ನಿಲುವೇನು;	-ಹೌದು- ಮೊರಾರ್ಜಿದೇಸಾಯಿ ವಸತಿ ಶಾಲೆ/ಕಾಲೇಜು, ಮಾದರಿ ವಸತಿ ಶಾಲೆ, ಸರ್ಕಾರಿ ಮುಸ್ಲಿಂ ವಸತಿ ಶಾಲೆಗಳಲ್ಲಿ ಅಲ್ಪಸಂಖ್ಯಾತರ ಸಮುದಾಯದ ಮುಸ್ಲಿಂ ವಿದ್ಯಾರ್ಥಿಗಳಿಗೆ ಅರೆಬಿಕ್ ಶಿಕ್ಷಣದ ಬೋಧನೆ ಇಲ್ಲದೇ ಇರುವುದರಿಂದ ಸದರಿ ಪೋಷಕರು ಮುಸ್ಲಿಂ ಸಮುದಾಯದ ವಿದ್ಯಾರ್ಥಿಗಳನ್ನು ದಾಖಲಾತಿ ಮಾಡಲು ಹಿಂಜರಿಯುತ್ತಿದ್ದಾರೆ. ಅದರಲ್ಲೂ ಮುಖ್ಯವಾಗಿ ದಕ್ಷಿಣ ಕನ್ನಡ, ಉತ್ತರ ಕನ್ನಡ, ಕೊಡಗು ಜಿಲ್ಲೆಗಳಲ್ಲಿ ದಾಖಲಾತಿಗೆ ಹಿಂಜರಿಯುತ್ತಿರುವುದು ಕಂಡು ಬಂದಿರುತ್ತದೆ ಹಾಗೂ ಜಿಲ್ಲೆಯ ಜಿಲ್ಲಾ ಅಲ್ಪಸಂಖ್ಯಾತರ ಅಧಿಕಾರಿಗಳು, ಪ್ರಾಂಶುಪಾಲರು ಸಭೆಗಳಲ್ಲಿ ದಾಖಲಾತಿಗಳು ಕಡಿಮೆಯಾಗಿರುವುದಕ್ಕೆ ಅರೆಬಿಕ್ ಶಿಕ್ಷಕರು ಇಲ್ಲದೇ ಇರುವುದು ಒಂದು ಕಾರಣವಾಗಿದೆ ಎಂದು ತಿಳಿಸಿ ಅರೆಬಿಕ್ ಶಿಕ್ಷಕರನ್ನು ನೇಮಿಸಲು ಕೋರಿರುವುದರಿಂದ ಗೌರವಧನ ನೀಡಿ ಅತಿಥಿ ಅರೆಬಿಕ್ ಶಿಕ್ಷಕರಿಂದ ಶಿಕ್ಷಣವನ್ನು ಮುಸ್ಲಿಂ ವಿದ್ಯಾರ್ಥಿಗಳಿಗೆ ಮಾತ್ರ ನೀಡಲಾಗುತ್ತಿದೆ.

ಈ)	ಇಲಾಖೆಯ ವತಿಯಿಂದ ನಡೆಯುತ್ತಿರುವ ವಸತಿ ಶಾಲೆಗಳಲ್ಲಿ ಮುಸ್ಲಿಂ ವಿದ್ಯಾರ್ಥಿಗಳನ್ನು ಹೊರತುಪಡಿಸಿ ಇತರ ಧರ್ಮದ ವಿದ್ಯಾರ್ಥಿಗಳು ವಿದ್ಯಾಭ್ಯಾಸ ಮಾಡುತ್ತಿರುವುದರಿಂದ ಈ ವಿದ್ಯಾರ್ಥಿಗಳಿಗೂ ಅರೆಬಿಕ್ ಶಿಕ್ಷಣ ಮತ್ತು ಶುಕ್ರವಾರದ ಪ್ರಾರ್ಥನೆಯನ್ನು ಕಡ್ಡಾಯಗೊಳಿಸಿ ಹೊರಡಿಸಿರುವ ಆದೇಶವು ಕಾನೂನು ಸುವ್ಯವಸ್ಥೆಗೆ ಧಕ್ಕೆ ಮಾಡುವ ಬಗ್ಗೆ ಸರ್ಕಾರದ ನಿಲುವೇನು?	ಮುಸ್ಲಿಂ ವಿದ್ಯಾರ್ಥಿಗಳನ್ನು ಹೊರತುಪಡಿಸಿ, ಇತರೆ ಧರ್ಮದ ವಿದ್ಯಾರ್ಥಿಗಳಿಗೆ ಅರೆಬಿಕ್ ಶಿಕ್ಷಣ ಮತ್ತು ಶುಕ್ರವಾರದ ಪ್ರಾರ್ಥನೆ ಕಡ್ಡಾಯಗೊಳಿಸುವ ಆದೇಶವನ್ನು ಹೊರಡಿಸಿರುವುದಿಲ್ಲ.

ಸಂಖ್ಯೆ:MWD 21 LMQ 2020

(ಶ್ರೀಮಂತ ಬಾಳಸಾಹೇಬ ಪಾಟೀಲ್)
ಕೈಮಗ್ಗ ಮತ್ತು ಜವಳಿ ಹಾಗೂ
ಅಲ್ಪಸಂಖ್ಯಾತರ ಕಲ್ಯಾಣ
ಸಚಿವರು.

ಅನುಬಂಧ - 1

• ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಎನ್.ರವಿಕುಮಾರ್ (ವಿಧಾನ ಸಭೆಯಿಂದ ಚುನಾಯಿತರಾದವರು)ರವರ ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ: 333 ಕ್ಕೆ ಅನುಬಂಧ-1

ಕ್ರ. ಸಂ	ಜಿಲ್ಲೆ	ಮುಸ್ಲಿಂ ವಸತಿ ಶಾಲೆಗಳ ಸಂಖ್ಯೆ	ಒಟ್ಟು ವಿದ್ಯಾರ್ಥಿಗಳ ಸಂಖ್ಯೆ		ಒಟ್ಟು
			ಗಂಡು	ಹೆಣ್ಣು	
1	ವಿಜಯಪುರ	1	57	177	234
2	ದಕ್ಷಿಣ ಕನ್ನಡ	1	65	0	65
3	ಕಲಬುರಗಿ	1	40	224	264
4	ಮಂಡ್ಯ	1	57	76	133
5	ರಾಮನಗರ	1	0	129	129
ಒಟ್ಟು		5	219	606	825

ಅನುಬಂಧ-2

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಎನ್.ರವಿಕುಮಾರ್ (ವಿಧಾನ ಸಭೆಯಿಂದ ಚುನಾಯಿತರಾದವರು)ರವರ ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ: 333 ಕ್ಕೆ ಅನುಬಂಧ-2

ಕ್ರ. ಸಂ	ಜಿಲ್ಲೆ	ಮುಸ್ಲಿಂ	ಕ್ರಿಶ್ಚಿಯನ್	ಜೈನ್	ಬೌದ್ಧ	ಸಿಖ್	ಪಾರ್ಸಿ	ಹಿಂದುಳಿದ ವರ್ಗ ಮತ್ತು ಪ.ಜಾತಿ & ಪ.ಪಂಗಡ	ವಿದ್ಯಾರ್ಥಿಗಳ ಒಟ್ಟು ಸಂಖ್ಯೆ
1	ಬೆಂಗಳೂರು(ನ)	0	0	0	0	0	0	0	0
2	ಬೆಂಗಳೂರು(ಗ್ರಾ)	97	1	0	0	0	0	85	183
3	ಬಾಗಲಕೋಟೆ	730	5	45	1	1	0	238	1020
4	ಬೆಳಗಾವಿ	597	5	116	0	0	0	327	1045
5	ಬಳ್ಳಾರಿ	894	1	1	0	0	0	349	1245
6	ಬೀದರ್	370	70	0	1	0	0	227	668
7	ವಿಜಯಪುರ	933	2	4	0	0	0	503	1442
8	ಚಾಮರಾಜನಗರ	66	20	0	0	0	0	65	151
9	ಚಿಕ್ಕಮಗಳೂರು	199	34	0	0	0	0	203	436
10	ಚಿತ್ರದುರ್ಗಾ	289	0	3	0	0	0	355	647
11	ಚಿಕ್ಕಬಳ್ಳಾಪುರ	309	5	1	0	0	0	464	779
12	ದಕ್ಷಿಣ ಕನ್ನಡ	160	10	1	0	0	0	106	277
13	ದಾವಣಗೆರೆ	572	2	2	0	0	0	362	938
14	ಧಾರವಾಡ	455	10	45	0	0	0	171	681
15	ಗದಗ	207	0	5	0	0	0	154	366
16	ಕಲಬುರಗಿ	1528	1	1	0	0	0	1024	2554
17	ಹಾಸನ	234	11	1	0	0	0	446	692
18	ಹಾವೇರಿ	623	2	115	0	0	0	326	1066
19	ಕೊಡಗು	54	14	0	0	0	0	300	368
20	ಕೋಲಾರ	170	4	0	0	0	0	133	307
21	ಕೊಪ್ಪಳ	1474	0	6	0	0	0	570	2050
22	ಮಂಡ್ಯ	368	0	0	0	0	0	121	489
23	ಮೈಸೂರು	166	31	12	0	0	0	144	353
24	ರಾಯಚೂರು	898	0	0	0	0	0	489	1387
25	ರಾಮನಗರ	341	7	2	0	0	0	297	647
26	ಶಿವಮೊಗ್ಗ	402	24	88	0	0	0	314	828
27	ತುಮಕೂರು	687	0	0	0	0	0	293	980
28	ಉಡುಪಿ	0	0	0	0	0	0	0	0
29	ಉತ್ತರ ಕನ್ನಡ	88	0	8	0	0	0	80	176
30	ಯಾದಗಿರಿ	245	3	0	0	0	0	87	335
	ಒಟ್ಟು	13156	262	456	2	1	0	8233	22110